ವಿಷಯ ಸಂಕೇತ
Subject Code **30**

# ಲೆಕ್ಕಶಾಸ್ತ್ರ / ACCOUNTANCY

(Kannada and English Versions)

30

| | | |
|---|---|---|
| ಸಮಯ: 3 ಗಂಟೆ 00 ನಿಮಿಷಗಳು | (ಒಟ್ಟು ಪ್ರಶ್ನೆಗಳ ಸಂಖ್ಯೆ : 32) | ಗರಿಷ್ಠ ಅಂಕಗಳು: 80 |
| Time : 3 Hours 00 Minutes] | [Total No. of Questions : 32] | [Max. Marks : 80 |

(Kannada Version)

ಸೂಚನೆಗಳು :

1. ಪ್ರಶ್ನೆ ಪತ್ರಿಕೆಯು ಎ, ಬಿ, ಸಿ ಮತ್ತು ಡಿ ಭಾಗಗಳನ್ನು ಹೊಂದಿದೆ. ಭಾಗ -'ಎ' ಯು I, II, III ಮತ್ತು IV ವಿಭಾಗಗಳನ್ನು ಒಳಗೊಂಡಿದೆ.
2. ಅಗತ್ಯವಿರುವ ಕಡೆ ಲೆಕ್ಕದ ಟಿಪ್ಪಣಿಗಳನ್ನು ಬರೆಯಿರಿ.
3. ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷದ ಅವಧಿಯನ್ನು ಹೆಚ್ಚುವರಿಯಾಗಿ ನೀಡಿದೆ.
4. ಹಾಳೆಯ ಬಲಬದಿಯಲ್ಲಿ ಬರೆದಿರುವ ಸಂಖ್ಯೆಗಳು ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಭಾಗ -'ಎ' ಯಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಭಾಗ – ಎ

I. ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : **(5 × 1 = 5)**

1) ಪಾಲುದಾರಿಕೆ ಕರಾರು ಪತ್ರದ ಅನುಪಸ್ಥಿತಿಯಲ್ಲಿ ಲಾಭ ಮತ್ತು ನಷ್ಟಗಳನ್ನು ಹಂಚಿಕೊಳ್ಳುವುದು.

a) ಬಂಡವಾಳದ ಪ್ರಮಾಣ b) ಸಮಾನ ಪ್ರಮಾಣ

c) ಒಪ್ಪಿದ ಪ್ರಮಾಣ d) ಯಾವುದೇ ಬೇರೆ ಪ್ರಮಾಣ.

2) ರಮೇಶ್, ಸತೀಶ್ ಮತ್ತು ರವೀಶ್ ಇವರ ಹಳೆ ಲಾಭದ ಹಂಚಿಕೆಯ ಅನುಪಾತವು 2:2:1 ಆಗಿರುತ್ತದೆ. ಸತೀಶನ ನಿವೃತ್ತಿಯ ನಂತರದಲ್ಲಿ ಹೊಸ ಲಾಭದ ಹಂಚಿಕೆಯ ಅನುಪಾತವು 3:2 ಇರುತ್ತದೆ. ಮುಂದುವರೆದ ಪಾಲುದಾರರ ಗಳಿಕೆಯ ಅನುಪಾತವು

a) 3 : 2 b) 2 : 1

c) 1 : 2 d) 1 : 1



https://www.karnatakaboard.com

3) ಒಂದು ಕಂಪನಿಯು 2,000, 8% ಸಾಲಪತ್ರವನ್ನು ರೂ. 100 ರ ಮುಖ ಬೆಲೆಯಲ್ಲಿ ನೀಡಿಕೆ ಮಾಡಿ, 10% ಪ್ರೀಮಿಯಂನಲ್ಲಿ ವಿಮುಕ್ತಿಗೊಳಿಸುವುದು. 8% ಅಂದರೆ ಏನನ್ನು ಸೂಚಿಸುತ್ತದೆ ?

a) ಲಾಭಾಂಶದ ದರ　　b) ತೆರಿಗೆ ದರ

c) TDS ದರ　　d) ಬಡ್ಡಿಯ ದರ

4) ಈ ಕೆಳಗಿನವುಗಳಲ್ಲಿ ಯಾವುದನ್ನು ಕಂಪನಿಯ ಕಾಯಿದೆಯ ಅಡಿಯಲ್ಲಿ ಸಿದ್ಧ ಪಡಿಸುವ ಅಗತ್ಯವಿರುವುದಿಲ್ಲ?

a) ನಿಧಿ ಹರಿವು ತಃಖ್ತೆ

b) ಆಢಾವೆ ಪತ್ರಿಕೆ

c) ನಿರ್ದೇಶಕರ ಮತ್ತು ಲೆಕ್ಕ ಪರಿಶೋಧಕರ ವರದಿ

d) ಲಾಭ ಮತ್ತು ನಷ್ಟದ ತಃಖ್ತೆ

5) ಗೋಚರ ಆಸ್ತಿಯು ₹ 4,00,000 ದಿಂದ ₹ 5,00,000ಕ್ಕೆ ಏರಿಕೆಯಾಗಿದೆ. ಶೇಕಡಾವಾರು ಬದಲಾವಣೆ ಎಷ್ಟು ?

a) 20%　　b) 25%

c) 33%　　d) 50%

II. ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ, ಖಾಲಿ ಬಿಟ್ಟ ಸ್ಥಳವನ್ನು ಭರ್ತಿಮಾಡಿ: **(5 × 1 = 5)**

(ಸಮತೋಲನ, ಅಭೌತಿಕ, ವರ್ಗಾಯಿಸುವುದು, ಬಂಡವಾಳ ಮೀಸಲು, ವರ್ಗಾಯಿಸುವುದಿಲ್ಲ , ಪೂರಕ)

6) ಕೀರ್ತಿ ಮೌಲ್ಯವು ಒಂದು ______ ಆಸ್ತಿ.

7) ಪಾಲುದಾರನ ಸಾಲವನ್ನು ವಿಲೇವಾರಿ ಖಾತೆಗೆ ______.

8) ಶೇರುಗಳ ಮುಟ್ಟುಗೋಲುಗಳಿಂದ ಬಂದ ಲಾಭವನ್ನು ______ ಖಾತೆಗೆ ವರ್ಗಾಯಿಸಲಾಗುವುದು.

9) ವಿಶ್ಲೇಷಣೆ ಮತ್ತು ಅರ್ಥೈಸುವುದು, ಇವೆರಡೂ ಪದಗಳು ಒಂದಕ್ಕೊಂದು ______ ಆಗಿದೆ.

10) ನಗದು ಹರಿವು ತಃಖ್ತೆಯು ನಗದು ಹರಿವಿನ ______ ತರಲು ಸಹ ಸಹಾಯ ಮಾಡುತ್ತದೆ.

III. ಹೊಂದಿಸಿ ಬರೆಯಿರಿ : **(5 × 1 = 5)**

11)

| A | B |
|---|---|
| (a) ಹೊಸ ಪಾಲುದಾರನ ಹಕ್ಕು | (i) ಲೆಕ್ಕ ಬರಹ ಶಿಷ್ಟ–3ರ ಪ್ರಕಾರ |
| (b) ಸಾಮಾನ್ಯ ಮುದ್ರೆ | (ii) ಅಲ್ಪಾವಧಿ ಸ್ವರೂಪ |
| (c) ಸಾಲಪತ್ರಗಳ ವಿಮೋಚನೆ | (iii) ಲೆಕ್ಕ ಬರಹ ಶಿಷ್ಟ–1ರ ಪ್ರಕಾರ |
| (d) ದ್ರವತ್ವದ ಅನುಪಾತಗಳು | (iv) ಭವಿಷ್ಯದ ಲಾಭವನ್ನು ಹಂಚಿಕೊಳ್ಳುವುದು |
| (e) ನಗದು ಹರಿವು ತಃಖ್ತೆ ತಯಾರಿಸುವುದು | (v) ಹೊಣೆಗಾರಿಕೆಯನ್ನು ಇಳಿಸುವುದು |
| | (vi) ಕಂಪನಿಯ ಅಧಿಕೃತ ಸಹಿ |



https://www.karnatakaboard.com

IV. ಕೆಳಗಿನ ಪ್ರಶ್ನೆಗಳಿಗೆ **ಒಂದು** ಪದ ಅಥವಾ **ಒಂದು** ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

12) ಪಾಲುದಾರಿಕೆ ಕರಾರು ಪತ್ರದ ಯಾವುದಾದರೂ ಒಂದು ಅಂಶವನ್ನು ತಿಳಿಸಿ.

13) ನಿಧನ ಹೊಂದಿದ ಪಾಲುದಾರನಿಗೆ ಕೊಡಬೇಕಾದ ಮೊತ್ತವನ್ನು ಪೂರ್ಣ ಪ್ರಮಾಣದ ನಗದು ಅಥವಾ ಬಡ್ಡಿಯನ್ನು ಒಳಗೊಂಡು ಕಂತಿನಲ್ಲಿ ಪಾವತಿಸಬಹುದು (ಸರಿ/ತಪ್ಪು ತಿಳಿಸಿ)

14) ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಯ ಯಾವುದಾದರೂ ಒಂದು ವಿಧವನ್ನು ಉಲ್ಲೇಖಿಸಿ.

15) ಚಾಲ್ತಿಯೇತರ ಹೊಣೆಗಾರಿಕೆಗೆ ಯಾವುದಾದರೂ ಒಂದು ಉದಾಹರಣೆಯನ್ನು ನೀಡಿ.

16) RONW ಅನ್ನು ವಿಸ್ತರಿಸಿ.

## ಭಾಗ – ಬಿ

V. ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಎರಡು** ಅಂಕಗಳು: **(3 × 2 = 6)**

17) ಸ್ಥಿರ ಬಂಡವಾಳ ವಿಧಾನ ಮತ್ತು ಬದಲಾಗುವ ಬಂಡವಾಳ ವಿಧಾನದ ನಡುವೆ ಇರುವ ಯಾವುದಾದರೂ ಎರಡು ವ್ಯತ್ಯಾಸವನ್ನು ತಿಳಿಸಿ.

18) ನಿವೃತ್ತ ಪಾಲುದಾರನಿಗೆ ಪೂರ್ಣ ಪ್ರಮಾಣದಲ್ಲಿ ನಗದನ್ನು ಪಾವತಿಸಿದಾಗ ಅದರ ರೋಜು ದಾಖಲೆಯನ್ನು ಬರೆಯಿರಿ.

19) ಶೇರು ಬಂಡವಾಳದ ಯಾವುದಾದರೂ ಎರಡು ವರ್ಗೀಕರಣವನ್ನು ಹೆಸರಿಸಿ.

20) ಹಣಕಾಸಿನ ತಃಖ್ತೆಯ ಯಾವುದಾದರೂ ಎರಡು ಉದ್ದೇಶಗಳನ್ನು ಬರೆಯಿರಿ.

21) ಕಾರ್ಯಾತ್ಮಕ ಚಟುವಟಿಕೆಗಳಿಂದ ಯಾವುದಾದರೂ ಎರಡು ನಗದು ಹರಿವುಗಳ ಉದಾಹರಣೆಯನ್ನು ತಿಳಿಸಿ.

## ಭಾಗ – ಸಿ

VI. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ **ಆರು** ಅಂಕಗಳು : **(3 × 6 = 18)**

**22) ವರುಣ್ ಮತ್ತು ತರುಣ್‌ರವರು ಒಂದು ಸಂಸ್ಥೆಯ ಪಾಲುದಾರರಾಗಿರುತ್ತಾರೆ. ಅವರುಗಳು 3 : 2 ರ ಅನುಪಾತದಲ್ಲಿ ಲಾಭ ಮತ್ತು ನಷ್ಟವನ್ನು ಹಂಚಿಕೆ ಮಾಡಿಕೊಳ್ಳುತ್ತಿರುತ್ತಾರೆ. ಅವರು ಕಿರಣ್ ಎಂಬುವರನ್ನು ಸಂಸ್ಥೆಗೆ ಸೇರಿಸಿಕೊಂಡು, ಬರುವ ಲಾಭದಲ್ಲಿ 1/6 ಭಾಗ ಕೊಡುವುದರ ಜೊತೆಗೆ ಕನಿಷ್ಠ ₹ 25,000 ಲಾಭವನ್ನು ನೀಡುವ ಭರವಸೆಯನ್ನು ಕೊಡುತ್ತಾರೆ. ಸಂಸ್ಥೆಯ ಒಟ್ಟು ಲಾಭ ₹ 90,000 ವಾಗಿರುತ್ತದೆ. ವರುಣ್ ಮತ್ತು ತರುಣ್‌ರವರು ಕೊಟ್ಟಿರುವ ಸಮನಾದ ಭರವಸೆಯೊಂದಿಗೆ ಪ್ರತಿ ಪಾಲುದಾರರ ಲಾಭದ ಭಾಗವನ್ನು ಕಂಡುಹಿಡಿಯಿರಿ. ಲಾಭ ಮತ್ತು ನಷ್ಟ ವಿತರಣಾ ಖಾತೆಯನ್ನು ತಯಾರಿಸಿ.**

**23) ರಾಜೇಶ್ ಮತ್ತು ರಾಕೇಶ್ ಪಾಲುದಾರರಾಗಿದ್ದು, 5:3 ರ ಅನುಪಾತದಲ್ಲಿ ಲಾಭ ಮತ್ತು ನಷ್ಟವನ್ನು ಹಂಚಿಕೊಳ್ಳುತ್ತಿದ್ದರು. ಅವರು ರಮೇಶ್ ಎಂಬುವರನ್ನು ಹೊಸ ಪಾಲುದಾರನಾಗಿ ಸೇರಿಸಿಕೊಳ್ಳುತ್ತಾರೆ. ಅವರ ನೂತನ ಲಾಭದ ಹಂಚಿಕೆಯ ಅನುಪಾತವು ಅನುಕ್ರಮವಾಗಿ 3:2:1. ಹಳೆಯ ಪಾಲುದಾರರ ತ್ಯಾಗದ ಅನುಪಾತವನ್ನು ಕಂಡು ಹಿಡಿಯಿರಿ.**



https://www.karnatakaboard.com

24) A, B ಮತ್ತು C ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು 5:3:2 ರ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31.03.2024 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ 31.03.2024 ರಂದು ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಸಾಹುಕಾರರು | 14,000 | ಕಟ್ಟಡಗಳು | 43,000 |
| ಸಾಮಾನ್ಯ ಮೀಸಲು | 6,000 | ಪೀಠೋಪಕರಣ | 10,000 |
| ಬಂಡವಾಳ | | ಮೋಟಾರು ವ್ಯಾನ್ | 6,000 |
| A – 30,000 | | ಯಂತ್ರೋಪಕರಣ | 25,000 |
| B– 30,000 | | ಸಾಲಗಾರರು | 8,000 |
| C – 20,000 | 80,000 | ಬ್ಯಾಂಕಿನಲ್ಲಿರುವ ನಗದು | 8,000 |
| | 1,00,000 | | 1,00,000 |

ದಿನಾಂಕ 01/10/2024 ರಂದು 'C' ನಿಧನ ಹೊಂದಿದರು. ಪಾಲುದಾರಿಕೆ ಒಪ್ಪಂದದಂತೆ, ಈ ಕೆಳಗಿನವುಗಳನ್ನು ನೀಡಲಾಗಿದೆ.

a. ಬಂಡವಾಳದ ಮೇಲಿನ ವಾರ್ಷಿಕ ಬಡ್ಡಿ 10% ರಂತೆ.

b. ಕಳೆದ 4 ವರ್ಷಗಳ ಸರಾಸರಿ ಲಾಭದ 3 ಪಟ್ಟು ಹೆಚ್ಚು ಆದರಿಸಿ ಸಂಸ್ಥೆಯ ಕೀರ್ತಿಮೌಲ್ಯವನ್ನು ಮೌಲ್ಯೀಕರಿಸಲಾಯಿತು. ಕಳೆದ 4 ವರ್ಷದ ಲಾಭ ಈ ಕೆಳಕಂಡಂತಿದೆ.

| | |
|---|---|
| 2020 -21 | ₹ 13,000 |
| 2021 - 22 | ₹ 12,000 |
| 2022-23 | ₹ 16,000 |
| 2023 -24 | ₹ 15,000 (AS – 26 ಪ್ರಕಾರ) |

c. ಹಿಂದಿನ ವರ್ಷದ ಲಾಭದ ಆಧಾರದ ಮೇಲೆ 'C' ನ ಲಾಭದ ಪಾಲನ್ನು ಅವನು ಮರಣಿಸಿದ ದಿನಾಂಕದವರೆಗೆ ಲೆಕ್ಕ ಹಾಕಬೇಕು.

C' ನ ವಾರಸುದಾರರ ಖಾತೆಯನ್ನು ತಯಾರಿಸಿ.

25) ಈ ಕೆಳಗಿನ ಮಾಹಿತಿಯಿಂದ ಪರಿಚ್ಛೇದ III ರಂತೆ ಕಂಪನಿ ಕಾಯಿದೆ 2013ರ ಪ್ರಕಾರ, 31-03-2024 ರ ವರ್ಷಕ್ಕೆ ಕೊನೆಗೊಂಡಂತೆ ಲಾಭ ಮತ್ತು ನಷ್ಟ ತಃಖ್ತೆಯನ್ನು ತಯಾರಿಸಿ.

| ವಿವರಗಳು | ₹ |
|---|---|
| ಕಾರ್ಯಾಚರಣೆಯಿಂದ ಬಂದ ಆದಾಯ | 3,85,000 |
| ಸರಕುಗಳ ಖರೀದಿ | 97,000 |
| ಇತರೆ ಆದಾಯ/ಗಳಿಕೆ | 75,000 |
| ನೌಕರ ಪ್ರಯೋಜನೆಗಳ ಖರ್ಚು | 1,03,000 |
| ಸಾಲದ ಮೇಲಿನ ಬಡ್ಡಿ | 30,000 |
| ಸಾಲಪತ್ರದ ಮೇಲಿನ ಬಡ್ಡಿ | 20,000 |
| ಸವಕಳಿ | 50,000 |
| ಅಗೋಚರ ಆಸ್ತಿಗಳನ್ನು ತೆಗೆದು ಹಾಕುವುದು | 33,000 |
| ಇತರೆ ಖರ್ಚುಗಳು | 1,08,000 |
| ತೆರಿಗೆ | 5,700 |



https://www.karnatakaboard.com

26) ಈ ಕೆಳಗಿನ ವಿವರಗಳಿಂದ, ಹೂಡಿಕೆ ಚಟುವಟಿಕೆಗಳಿಂದಾದ ನಗದು ಹರಿವನ್ನು ಲೆಕ್ಕಾಚಾರ ಮಾಡಿ.

| ವಿವರಗಳು | ಖರೀದಿ ₹ | ಮಾರಾಟ ₹ |
|---|---|---|
| ಯಂತ್ರೋಪಕರಣ | 2,00,000 | – |
| ಹೂಡಿಕೆಗಳು | 1,50,000 | 60,000 |
| ಹಕ್ಕುಗಳು | – | 50,000 |
| ಭೂಮಿ | 1,00,000 | – |

ಹೆಚ್ಚುವರಿ ಮಾಹಿತಿ :

ಹೂಡಿಕೆ ಮಾಡಿದ ಶೇರುಗಳ ಮೇಲೆ ಬಂದ ಲಾಭಾಂಶ ₹ 35,000

## ಭಾಗ – ಡಿ

VII. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ 12 ಅಂಕಗಳು. **(3 × 12 = 36)**

27) ಮಂಜು, ಮೋಹನ್ ಮತ್ತು ಮದನ್ ಪಾಲುದಾರರಾಗಿದ್ದು, ಲಾಭ ಮತ್ತು ನಷ್ಟವನ್ನು ಅನುಕ್ರಮವಾಗಿ ಹಂಚಿಕೊಳ್ಳುವ ಪ್ರಮಾಣ 2:2:1. ದಿನಾಂಕ 31-03-2024 ರಂದು ಅವರ ಆಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ 31.03.2024 ರಂದು ಆಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಸಾಹುಕಾರರು | 35,500 | ಬ್ಯಾಂಕಿನಲ್ಲಿ ಇರುವ ನಗದು | 20,000 |
| ಸಾಮಾನ್ಯ ಮೀಸಲು | 22,500 | ಸಾಲಗಾರರು 40,000 | |
| | | ಕಳಿ – PDD 2,000 | 38,000 |
| ಬಂಡವಾಳ | | ದಾಸ್ತಾನು | 15,000 |
| ಮಂಜು – 50,000 | | ಯಂತ್ರೋಪಕರಣ | 25,000 |
| ಮೋಹನ್ – 30,000 | | ಪೀಠೋಪಕರಣ | 10,000 |
| ಮದನ್ – 20,000 | 1,00,000 | ಕಟ್ಟಡಗಳು | 50,000 |
| | 1,58,000 | | 1,58,000 |

ದಿನಾಂಕ 01/04/2024 ರಂದು ಮದನ್ ಸಂಸ್ಥೆಯಿಂದ ನಿವೃತ್ತನಾಗುತ್ತಾನೆ. ನಂತರ ಈ ಕೆಳಗಿನ ಹೊಂದಾಣಿಕೆಗಳನ್ನು ಮಾಡಲಾಯಿತು.

a) ದಾಸ್ತಾನಿನ ಮೌಲ್ಯವನ್ನು ಶೇ.20 ರಷ್ಟು ಹೆಚ್ಚಿಸಿ.

b) ಸಾಲಗಾರರ ಮೇಲೆ ಶೇ.10 ರಷ್ಟನ್ನು ಸಂಶಯಾತ್ಮಕ ಸಾಲಗಳಿಗಾಗಿ ಕಾಯ್ದಿರಿಸಿ.

c) ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಮೇಲೆ ಶೇ. 10% ರಷ್ಟು ಸಮಾನವಾಗಿ ಸವಕಳಿ ಕಳೆಯಿರಿ.

11225



https://www.karnatakaboard.com

d) ಕಟ್ಟಡಗಳನ್ನು ₹ 60,000 ಕ್ಕೆ ಪುನರ್ ಮೌಲ್ಯ ಮಾಡಲಾಗಿದೆ.

e) ಸಂಸ್ಥೆಯ ಕೀರ್ತಿ ಮೌಲ್ಯವನ್ನು ₹ 15,000 ಕ್ಕೆ ಮೌಲ್ಯಗೊಳಿಸಲಾಗಿದೆ. (AS-26 ಪ್ರಕಾರ) ತಯಾರಿಸಿ.

i) ಪುನರ್ ಮೌಲ್ಯ ಖಾತೆ

ii) ಎಲ್ಲಾ ಪಾಲುದಾರರ ಬಂಡವಾಳ ಖಾತೆಗಳು ಮತ್ತು

iii) ದಿನಾಂಕ 01/04/2024 ರ ಅಢಾವೆ ಪತ್ರಿಕೆ.

28) ಶ್ರೀದೇವಿ ಮತ್ತು ಶ್ರೀಪ್ರಿಯ ಪಾಲುದಾರರಾಗಿದ್ದು ಲಾಭ ಮತ್ತು ನಷ್ಟವನ್ನು ಸಮಾನ ಅನುಪಾತದಲ್ಲಿ ಹಂಚಿಕೊಳ್ಳುತ್ತಿದ್ದರು. ದಿನಾಂಕ 31/03/2024 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

ದಿನಾಂಕ 31-03-2024 ರಂದು ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ಆಸ್ತಿಗಳು | ₹ |
|---|---|---|---|
| ಸಾಹುಕಾರರು | 50,000 | ಬ್ಯಾಂಕಿನಲ್ಲಿ ಇರುವ ನಗದು | 18,000 |
| ಕೊಡತಕ್ಕ ಹುಂಡಿಗಳು | 30,000 | ಬರತಕ್ಕ ಹುಂಡಿಗಳು | 20,000 |
| ಮೀಸಲು ನಿಧಿ | 10,000 | ದಾಸ್ತಾನು | 30,000 |
| ಬಂಡವಾಳ | | ಸಾಲಗಾರರು | 40,000 |
| ಶ್ರೀದೇವಿ – 75,000 | | ಕಟ್ಟಡಗಳು | 50,000 |
| ಶ್ರೀಪ್ರಿಯ – 60,000 | | ಮೋಟಾರು ಕಾರು | 27,000 |
| | 1,35,000 | ಪೀಠೋಪಕರಣಗಳು | 40,000 |
| | 2,25,000 | | 2,25,000 |

ಈ ಮೇಲಿನ ದಿನಾಂಕದಂದು ಅವರು ಸಂಸ್ಥೆಯನ್ನು ವಿಸರ್ಜಿಸಲು ತೀರ್ಮಾನಿಸಿದರು.

ಹೆಚ್ಚುವರಿ ಮಾಹಿತಿ :

a) ಆಸ್ತಿಗಳನ್ನು ಈ ಕೆಳಗಿನಂತೆ ವಿಲೇವಾರಿ ಮಾಡಲಾಯಿತು.

ದಾಸ್ತಾನು – ₹ 30,400, ಬರತಕ್ಕ ಹುಂಡಿಗಳು – ₹ 19,000, ಪೀಠೋಪಕರಣಗಳು – ₹ 35,000, ಸಾಲಗಾರರು – ₹ 42,600 (ಬಡ್ಡಿ ಸಹಿತ)

b) ಕಟ್ಟಡವನ್ನು ಶ್ರೀದೇವಿ ₹ 60,000 ಮೌಲ್ಯಕ್ಕೆ ತೆಗೆದು ಕೊಳ್ಳುತ್ತಾರೆ ಮತ್ತು ಮೋಟಾರ್ ಕಾರನ್ನು ₹ 26,600 ಕ್ಕೆ ಶ್ರೀಪ್ರಿಯರವರು ತೆಗೆದುಕೊಳ್ಳುವುದಕ್ಕೆ ಒಪ್ಪಿಕೊಳ್ಳುತ್ತಾರೆ.

c) ಸಂಸ್ಥೆಯ ಎಲ್ಲಾ ಹೊಣೆಗಾರಿಕೆಗಳನ್ನು ಪೂರ್ತಿ ಪಾವತಿ ಮಾಡಲಾಯಿತು.

d) ವಿಲೇವಾರಿ ಲೆಚ್ಚಗಳು ₹ 5,000.



https://www.karnatakaboard.com

ತಯಾರಿಸಿ :

i) ವಿಲೇವಾರಿ ಖಾತೆ

ii) ಪಾಲುದಾರರ ಬಂಡವಾಳ ಖಾತೆಗಳು ಮತ್ತು

iii) ಬ್ಯಾಂಕ್ ಖಾತೆ

29) ಹೇಮ ಕಂಪನಿ ನಿಯಮಿತ ಇವರು ₹100 ರ ಮುಖ ಬೆಲೆಯ, 60,000 ಇಕ್ವಿಟಿ ಶೇರುಗಳನ್ನು ಪ್ರತಿ ಶೇರಿಗೆ ₹ 10 ರ ಪ್ರೀಮಿಯಂನಂತೆ ಬಿಡುಗಡೆ ಮಾಡಿದರು. ಹಣ ಪಾವತಿಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಅರ್ಜಿಯ ಹಣ – ₹ 20 .

ಹಂಚಿಕೆಯ ಹಣ – ₹ 50 (ಪ್ರೀಮಿಯಂ ಸೇರಿ).

ಪ್ರಥಮ ಮತ್ತು ಅಂತಿಮ ಕರೆಯ ಹಣ – ₹ 40 .

ಎಲ್ಲಾ ಶೇರುಗಳು ವಂತಿಗೆಯಾಗಿದ್ದು , 5,000 ಶೇರುಗಳಿಗೆ ಸಂಬಂಧಿಸಿದಂತೆ, ಪ್ರಥಮ ಹಾಗೂ ಅಂತಿಮ ಕರೆಯ ಹೊರತಾಗಿ ಉಳಿದೆಲ್ಲಾ ಹಣ ಸ್ವೀಕರಿಸಲಾಗಿದೆ. ಆ 5,000 ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು, ಅದರಲ್ಲಿ ಕೇವಲ 4,000 ಶೇರುಗಳನ್ನು ಪ್ರತಿ ಶೇರಿಗೆ ₹ 80 ರಂತೆ ಪೂರ್ಣ ಪಾವತಿಗೆ ಮರು ಬಿಡುಗಡೆ ಮಾಡುತ್ತಾರೆ.

ಕಂಪನಿಯ ಪುಸ್ತಕದಲ್ಲಿ ಅವಶ್ಯಕ ರೋಜು ದಾಖಲೆಗಳನ್ನು ಬರೆಯಿರಿ.

30) ಈ ಕೆಳಗಿನ ಪ್ರತಿಯೊಂದು ಸಂದರ್ಭದಲ್ಲಿ ಸಾಲಪತ್ರಗಳನ್ನು ವಿಮೋಚನೆಗೊಳಿಸಿದ ವೇಳೆ ಅಗತ್ಯವಿರುವ ರೋಜು ದಾಖಲೆಗಳನ್ನು ಕೊಡಿ.

i) 'M' ಕಂಪನಿ ನಿಯಮಿತವು, ತಲಾ ₹ 100 ಮುಖ ಬೆಲೆಯಲ್ಲಿ ಶೇ. 8 ರ 10,000, ಸಾಲಪತ್ರಗಳನ್ನು ನೀಡಿದೆ ಮತ್ತು 5 ವರ್ಷಗಳ ಕೊನೆಯಲ್ಲಿ ಬಂಡವಾಳದಿಂದ ಮುಖ ಬೆಲೆಯಲ್ಲಿ ವಿಮೋಚನೆ ಮಾಡಬಹುದಾಗಿದೆ.

ii) 'N' ಕಂಪನಿ ನಿಯಮಿತವು, ತಲಾ ₹ 100 ಮುಖ ಬೆಲೆಯಲ್ಲಿ ಶೇ. 12 ರ 4,000 ಸಾಲಪತ್ರಗಳನ್ನು ಶೇ. 10 ರ ಪ್ರೀಮಿಯಂನಲ್ಲಿ 4 ವರ್ಷಗಳ ಕೊನೆಯಲ್ಲಿ ವಿಮೋಚನೆಗೊಳಿಸಬಹುದು.

iii) 'O' ಕಂಪನಿ ನಿಯಮಿತವು ಶೇ.10 ರ ಒಟ್ಟು ಮುಖ ಬೆಲೆಯ ಮೌಲ್ಯ ₹ 8,00,000 ದ ಸಾಲಪತ್ರಗಳನ್ನು ಶೇ. 5 ರಂತೆ ಪ್ರೀಮಿಯಂನಲ್ಲಿ ನೀಡಿದೆ ಮತ್ತು 4 ವರ್ಷದ ಕೊನೆಯಲ್ಲಿ ಮುಖ ಬೆಲೆಗೆ ವಿಮೋಚನೆಗೊಳಿಸಿದೆ.

iv) 'P' ಕಂಪನಿ ನಿಯಮಿತವು 3,00,000ದ ಶೇ.10ರ ಸಾಲಪತ್ರಗಳನ್ನು ಶೇ. 5ರ ಸೋಡಿಯಲ್ಲಿ ನೀಡಿದೆ. ಆದರೆ 5 ವರ್ಷಗಳ ಕೊನೆಯಲ್ಲಿ ಶೇ.5ರ ಪ್ರೀಮಿಯಂನಲ್ಲಿ ವಿಮೋಚನೆಗೊಳಿಸಬಹುದಾಗಿದೆ.

v) 'Q' ಕಂಪನಿ ನಿಯಮಿತವು ತಲಾ ₹ 100 ರ ಮುಖ ಬೆಲೆಯ ಶೇ.8ರ 2,000 ಸಾಲಪತ್ರಗಳನ್ನು ಶೇ.5ಕ್ಕೆ ಪ್ರೀಮಿಯಂನಲ್ಲಿ ನೀಡಿದೆ ಮತ್ತು 4 ವರ್ಷಗಳ ಕೊನೆಯಲ್ಲಿ ಮುಖ ಬೆಲೆಗೆ ವಿಮೋಚನೆಗೊಳಿಸಬಹುದು.



https://www.karnatakaboard.com

31) ವಾಗೀಶ್ ಕಂಪನಿ ನಿಯಮಿತರವರ ಈ ಕೆಳಗಿನ ಮಾಹಿತಿಗಳಿಂದ ಸಾಮಾನ್ಯ ಗಾತ್ರದ ಆಢಾವೆ ಪತ್ರಿಕೆ ತಯಾರಿಸಿ.

| ವಿವರಗಳು | 31-03-2023 ₹ | 31-03-2024 ₹ |
|---|---|---|
| ಇಕ್ವಿಟಿ ಶೇರು ಬಂಡವಾಳ | 8,50,000 | 10,00,000 |
| ಮೀಸಲು ಮತ್ತು ಉಳಿಕೆ ಲಾಭ | 1,00,000 | 50,000 |
| ದೀರ್ಘಾವಧಿ ಸಾಲಗಳು | 4,50,000 | 5,75,000 |
| ಅಲ್ಪಾವಧಿ ಸಾಲಗಳು | 1,50,000 | 2,25,000 |
| ಗೋಚರ ಆಸ್ತಿಗಳು | 7,50,000 | 9,00,000 |
| ಅಗೋಚರ ಆಸ್ತಿಗಳು | 4,00,000 | 4,50,000 |
| ದಾಸ್ತಾನು | 1,00,000 | 2,00,000 |
| ಇತರೆ ಚಾಲ್ತಿ ಆಸ್ತಿಗಳು | 3,00,000 | 3,00,000 |

32) ಈ ಕೆಳಗಿನ ಮಾಹಿತಿಗಳಿಂದ, ನೀವು ಈ ಅನುಪಾತಗಳನ್ನು ಕಂಡುಹಿಡಿಯಿರಿ:

a) ಚಾಲ್ತಿ ಅನುಪಾತ.

b) ಒಟ್ಟು ಆಸ್ತಿಗಳು – ಋಣದ ಅನುಪಾತ.

c) ಸ್ಥಿರ ಆಸ್ತಿಗಳ ಆವರ್ತನ ಅನುಪಾತ.

d) ದುಡಿಯುವ ಬಂಡವಾಳದ ಆವರ್ತನ ಅನುಪಾತ.

e) ಕಾರ್ಯಚರಣೆ ಲಾಭದ ಅನುಪಾತ ಮತ್ತು

f) ಪ್ರತಿ ಶೇರಿನ ಪುಸ್ತಕ ಮೌಲ್ಯ.

| ವಿವರಗಳು | ₹ |
|---|---|
| ಕಾರ್ಯಾಚರಣೆಗಳಿಂದ ಬಂದ ಆದಾಯ | 20,00,000 |
| ಪಾವತಿಸಿದ ಇಕ್ವಿಟಿ ಶೇರುಗಳು ತಲಾ ₹ 10/- ರಂತೆ | 5,00,000 |
| ಚಾಲ್ತಿ ಆಸ್ತಿಗಳು | 4,00,000 |
| ಕಾರ್ಯಾಚರಣೆಯ ಲಾಭ | 16,00,000 |
| 13% ಸಾಲ ಪತ್ರಗಳು | 1,00,000 |
| ಸಾಮಾನ್ಯ ಮೀಸಲು | 1,00,000 |
| 10% ಪ್ರಾಶಸ್ತ್ಯದ ಶೇರುಗಳು ತಲಾ ₹ 10/- ರಂತೆ | 2,00,000 |
| ಚಾಲ್ತಿ ಹೊಣೆಗಾರಿಕೆಗಳು | 2,50,000 |
| ಸ್ಥಾವರ ಮತ್ತು ಯಂತ್ರೋಪಕರಣ | 3,00,000 |
| ಪೀಠೋಪಕರಣ | 5,00,000 |
| ತೆರಿಗೆ ನಂತರದ ಲಾಭ | 1,00,000 |



https://www.karnatakaboard.com

(English Version)

Instructions :

1. The question paper contains four parts A, B, C and D. Part – A contains of four sections I, II, III and IV.
2. Provide working notes wherever necessary.
3. 15 minutes extra has been allotted for candidates to read the questions.
4. Figures in the right hand margin indicate full marks.
5. For **PART – A** questions, only the first written answers will be considered for evaluation.

## PART – A

I. Choose the correct answer from the choices given: **(5 × 1 = 5)**

1) In the absence of partnership deed, profits or losses must be shared in

a) Capital proportion
b) Equal proportion
c) Agreed proportion
d) Any other proportion

2) The old profit sharing ratio among Ramesh, Sathish and Ravish were 2:2:1. The new profit sharing ratio after Sathish's retirement is 3:2. The gain ratio of continuing partners is

a) 3 : 2
b) 2 : 1
c) 1 : 2
d) 1 : 1

3) A company issued 2,000, 8% debentures of ₹100 each at par value redeemable at 10% premium. 8% stands for :

a) Rate of dividend
b) Rate of tax
c) Rate of TDS
d) Rate of interest

4) Which of the following is not required to be prepared under the Companies Act?

a) Fund flow statement
b) Balance sheet
c) Report of directors and auditors
d) Statement of profit and loss



https://www.karnatakaboard.com

5) Tangible assets of a company increased from ₹ 4,00,000 to ₹ 5,00,000. What is the percentage of change?

a) 20% b) 25%

c) 33% d) 50%

II. Fill in the blanks by choosing the appropriate answers from those given in the bracket: **(5 × 1 = 5)**

(balancing, intangible, transferred, capital reserve, not transferred, complimentary)

6) Goodwill is an ______ asset.

7) Partner's loan is ______ to the realisation account.

8) Profit on forfeiture of shares is transferred to ______ account.

9) Analysis and interpretation are ______ to each other.

10) Cash flow statement also helps in ______ of cash flows.

III. Match the following: **(5 × 1 = 5)**

11)

| A | B |
|---|---|
| (a) Right of a new partner | (i) As per AS-3 |
| (b) Common seal | (ii) Short term in nature |
| (c) Redemption of debenture | (iii) As per AS-1 |
| (d) Liquidity ratio | (iv) Share in future profit |
| (e) Cash flow statement prepared | (v) Discharge of liability |
| | (vi) Official signature of the company |

IV. Answer the following questions in one word or one sentence each: **(5 × 1 = 5)**

12) State any one content of the partnership deed.

13) Deceased partner may be paid in one lumpsum or instalments with interest. (State true/false)

14) Mention any one way of dissolution of partnership firm.

15) Give an example for non-current liabilities.

16) Expand RONW.



https://www.karnatakaboard.com

## PART – B

V. Answer any three of the following. Each question carries two marks: **(3 × 2 = 6)**

17) State any two differences between fixed capital method and fluctuating capital method.

18) Give the journal entry when retiring partner is paid cash in full.

19) Name any two categories of share capital.

20) Write any two objectives of financial statements.

21) State any two examples of cash flow from operating activities.

## PART – C

VI. Answer any three questions, each question carries six marks. **(3 × 6 = 18)**

22) Varun and Tarun were partners in a firm sharing profits and losses in the ratio of 3:2. They admit Kiran for $1/6^{th}$ share in profits and guaranteed that his share of profit will not be less than ₹ 25,000. The total profits of the firm was ₹ 90,000. Calculate the share of profits for each partner when guarantee is given by Varun and Tarun equally. Prepare Profit and Loss Appropriation Account.

23) Rajesh and Rakesh are partners sharing profits and losses in ratio of 5:3. They admit Ramesh as a new partner. The new profit sharing ratio is 3:2:1 respectively. Find out the sacrifice ratio of old partners. https://www.karnatakaboard.com

24) A, B and C are partners sharing profits and losses in the ratio of 5:3:2. Their balance sheet as on 31/03/2024 was as follows:

**Balance Sheet as on 31-03-2024**

| Liabilities | ₹ | Assets | ₹ |
|---|---|---|---|
| Creditors | 14,000 | Buildings | 43,000 |
| General Reserve | 6,000 | Furniture | 10,000 |
| Capitals | | Motor Van | 6,000 |
| A – 30,000 | | Machinery | 25,000 |
| B– 30,000 | | Debtors | 8,000 |
| C – 20,000 | 80,000 | Cash at Bank | 8,000 |
| | 1,00,000 | | 1,00,000 |



https://www.karnatakaboard.com

'C' died on 01/10/2024 and partnership deed has provided the following:

a. Interest on capital at 10% p.a.

b. Goodwill of the firm be valued at 3 times the average profit of last four years.

Last four years profits are as follows:

| | |
|---|---|
| 2020-21 | ₹ 13,000 |
| 2021-22 | ₹ 12,000 |
| 2022-23 | ₹ 16,000 |
| 2023-24 | ₹ 15,000 (As per AS–26). |

c. C's share of profit till the date of death should be calculated on the basis of last year profit.

Prepare C's executor's account.

25) From the following information, prepare a statement of profit and loss for the year ended 31-03-2024 as per Schedule III of the Companies Act, 2013.

| Particulars | ₹ |
|---|---|
| Revenue from operations | 3,85,000 |
| Purchase of goods | 97,000 |
| Other income | 75,000 |
| Employee benefits expense | 1,03,000 |
| Interest on loan | 30,000 |
| Interest on debenture | 20,000 |
| Depreciation | 50,000 |
| Amortisation of intangible assets | 33,000 |
| Other expenses | 1,08,000 |
| Tax | 5,700 |

26) **From the following particulars, calculate cash from interesting activities:**

| Particulars | Purchased ₹ | Sold ₹ |
|---|---|---|
| Machinery | 2,00,000 | – |
| Investments | 1,50,000 | 60,000 |
| Patents | – | 50,000 |
| Land | 1,00,000 | – |

**Additional Information:**

Dividend received on **shares held as investments ₹ 35,000**



https://www.karnatakaboard.com

## PART – D

VII. Answer any three questions, each question carries twelve marks: **(3 × 12 = 36)**

27) Manju, Mohan and Madhan are partners sharing profits and losses in the ratio of 2:2:1 respectively. Their balance sheet as on 31/03/2024 was as follows:

Balance Sheet as on 31-03-2024

| LIABILITIES | ₹ | ASSETS | ₹ |
|---|---|---|---|
| Creditors | 35,500 | Cash at Bank | 20,000 |
| General Reserve | 22,500 | Debtors 40,000 | |
| | | Less: PDD 2,000 | 38,000 |
| Capitals | | Stock | 15,000 |
| Manju – 50,000 | | Machinery | 25,000 |
| Mohan – 30,000 | | Furniture | 10,000 |
| Madhan – 20,000 | 1,00,000 | Buildings | 50,000 |
| TOTAL | 1,58,000 | TOTAL | 1,58,000 |

Madhan retired on 01/04/2024 from the firm. After retirement of Madhan, the following adjustments are to be made.

a) Stock to be increased by 20%

b) Maintain PDD at 10% on debtors.

c) Depreciate machinery and furniture by 10% each

d) Buildings are revalued at ₹ 60,000.

e) Goodwill of the firm valued at ₹ 15,000 (As per AS-26).

Prepare:

I) Revaluation Account

II) All Partners' capital Accounts and

III) Balance sheet as on 01/04/2024

112257



https://www.karnatakaboard.com

28) Sridevi and Sripriya are partners sharing profits and losses equally. Their balance sheet as on 31/03/2024 was as follows.

Balance Sheet as on 31-03-2024

| LIABILITIES | ₹ | ASSETS | ₹ |
|---|---|---|---|
| Creditors | 50,000 | Cash at bank | 18,000 |
| Bills payable | 30,000 | Bills Receivables | 20,000 |
| Reserve fund | 10,000 | Stock | 30,000 |
| Capitals: | | Debtors | 40,000 |
| Sridevi – 75,000 | | Building | 50,000 |
| Sripriya – 60,000 | | Motor car | 27,000 |
| | 1,35,000 | Furniture | 40,000 |
| | 2,25,000 | | 2,25,000 |

On the above date, they decided to dissolve the firm.

Additional information:

a) Assets realised as follows :

Stock – ₹ 30,400, Bills Receivables – ₹ 19,000, Furniture – ₹ 35,000, Debtors – ₹ 42,600 (with interest)

b) Sridevi took over Buildings at ₹ 60,000 and Sripriya agreed to take over motor car at ₹ 26,600.

c) All liabilities were paid in full by the firm.

d) Realisation expenses were ₹ 5,000.

Prepare:

i) Realisation Account

ii) Partner's Capital Accounts and

iii) Bank Account



https://www.karnatakaboard.com

29) Hema Company Ltd issued 60,000 equity shares of ₹100 each at a premium of ₹ 10 per share. The amount payable are as follows:

On application ₹ 20 .

On allotment ₹ 50 (including premium).

On first and final call ₹ 40 .

All the shares were subscribed and the money duly received except the first and final call on 5,000 shares. These shares were forfeited and out of these only 4,000 shares are reissued at ₹ 80 each as fully paidup.

Pass the necessary journal entries in the books of the company.

112257

30) Pass necessary journal entries at the time of redemption of debentures in each of the following cases.

i) 'M' Company Ltd. issued 10,000, 8% debentures of ₹ 100 each at par and redeemable at par at the end of 5 years out of capital

112257

ii) 'N' Company Ltd. issued 4,000, 12% debentures of ₹ 100 each at par. These debentures are redeemable at 10% premium at the end of 4 years.

iii) 'O' Company Ltd. issued 10% debentures of the total face value of ₹ 8,00,000 at a premium of 5% to be redeemed at par at the end of 4 years.

iv) 'P' Company Ltd. issued 3,00,000, 10% debentures at a discount of 5% but redeemable at a premium of 5% at the end of 5 years.

v) 'Q' Company Ltd. issued 2,000, 8% debentures of ₹ 100 each at a premium of 5% to be redeemed at par at the end of 4 years

112257



https://www.karnatakaboard.com

31) From the following information, prepare common size balance sheet of Vageesh Co. Ltd.

| Particular | 31/03/2023 ₹ | 31/03/2024 ₹ |
|---|---|---|
| Equity share capital | 8,50,000 | 10,00,000 |
| Reserves and surplus | 1,00,000 | 50,000 |
| Long-term borrowings | 4,50,000 | 5,75,000 |
| Short-term borrowings | 1,50,000 | 2,25,000 |
| Tangible assets | 7,50,000 | 9,00,000 |
| Intangible assets | 4,00,000 | 4,50,000 |
| Inventories | 1,00,000 | 2,00,000 |
| Other current assets | 3,00,000 | 3,00,000 |

32) From the following information, you are required to calculate:

a) Current Ratio.

b) Total Assets to debt Ratio.

c) Fixed Assets Turnover Ratio.

d) Working capital Turnover Ratio.

e) Operating Profit Ratio and

f) Book value per share.

| Particulars | ₹ |
|---|---|
| Revenue from operations | 20,00,000 |
| Paidup equity shares of ₹ 10/- each | 5,00,000 |
| Current Assets | 4,00,000 |
| Operating Profit | 16,00,000 |
| 13% Debentures | 1,00,000 |
| General Reserve | 1,00,000 |
| 10% preference shares of ₹ 10/- each | 2,00,000 |
| Current liabilities | 2,50,000 |
| Plant and Machinery | 3,00,000 |
| Furniture | 5,00,000 |
| Net profit after tax | 1,00,000 |



https://www.karnatakaboard.com